Get Printed Study Notes for UPSC Exam - https://iasexamportal.com/notes

CIVIL SERVICES (MAIN) EXAM-2022



# ಕನ್ನಡ / KANNADA

## (ಕಡ್ಡಾಯ ಪತ್ರಿಕೆ) / (Compulsory)

| | |
|---|---|
| ವೇಳೆ : ಮೂರು ಗಂಟೆ<br>*Time Allowed : **Three** Hours* | ಗರಿಷ್ಠ ಅಂಕಗಳು : 300<br>*Maximum Marks : 300* |

### ಪ್ರಶ್ನೆ ಪತ್ರಿಕೆ ನಿರ್ದಿಷ್ಟ ಸೂಚನೆಗಳು

**ಪ್ರಶ್ನೆಗಳನ್ನು ಉತ್ತರಿಸುವ ಮುನ್ನ ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಎಚ್ಚರಿಕೆಯಿಂದ ಓದಿರಿ :**

ಎಲ್ಲಾ ಪ್ರಶ್ನೆಗಳನ್ನೂ ಉತ್ತರಿಸಬೇಕು.

ಪ್ರಶ್ನೆ/ಪ್ರಶ್ನೆಯ ಭಾಗಗಳಿಗೆ ಅನ್ವಯವಾಗುವ ಅಂಶಗಳನ್ನು ಅವುಗಳ ಎದುರಿಗೆ ಕೊಡಲಾಗಿದೆ.

ಉತ್ತರಗಳನ್ನು ಪ್ರಶ್ನೆಯಲ್ಲಿ ಸೂಚಿಸದ ಹೊರತು, **ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)** ಬರೆಯಬೇಕು.

ಎಲ್ಲೆಲ್ಲಿ ಪ್ರಶ್ನೆಗಳಲ್ಲಿ ಪದಗಳ ಮಿತಿಯನ್ನು ಸೂಚಿಸಲಾಗಿದೆಯೋ ಆ ಸೂಚನೆಯನ್ನು ಪಾಲಿಸಬೇಕು. ಪದಗಳ ಮಿತಿ ಸೂಚಿಸಿದ್ದಕ್ಕಿಂತ ಹೆಚ್ಚು ಅಥವಾ ಕಡಿಮೆಯಾದಲ್ಲಿ ಅಂಕಗಳನ್ನು ಕಡಿತಗೊಳಿಸಲಾಗುವುದು.

ಯಾವುದಾದರೂ ಪುಟ ಅಥವಾ ಪುಟದ ಭಾಗವನ್ನು ಪ್ರಶ್ನೆ ಸಹಿತವಾದ ಉತ್ತರ ಪತ್ರಿಕೆಯಲ್ಲಿ ಖಾಲಿ ಬಿಟ್ಟಲ್ಲಿ, ಆ ಜಾಗವನ್ನು ಸ್ಪಷ್ಟವಾಗಿ ಪೆನ್ನಿನಿಂದ ಹೊಡೆದು ಹಾಕಬೇಕು.

### Question Paper Specific Instructions

***Please read each of the following instructions carefully before attempting questions :***

*All questions are to be attempted.*

*The number of marks carried by a question / part is indicated against it.*

*Answers must be written in **KANNADA (Kannada script)** unless otherwise directed in the question.*

*Word limit in questions, wherever specified, should be adhered to and if answered in much longer or shorter than the prescribed length, marks may be deducted.*

*Any page or portion of the page left blank in the Question-cum-Answer Booklet must be clearly struck off.*



Download FREE UPSC E-BOOKS FREE! CLICK HERE

Get Printed Study Notes for UPSC Exam - https://iasexamportal.com/notes

**Q1.** ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು 600 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : *100*

(a) ಪುನರ್ ನವೀಕರಣ ಶಕ್ತಿ : ಸಾಧ್ಯತೆಗಳು ಮತ್ತು ಸವಾಲುಗಳು

(b) ಸಂವಹನ ಕ್ರಾಂತಿಯ ಮಹತ್ವ

(c) ಕ್ರೀಡೆಗಳಲ್ಲಿ ಹೆಚ್ಚುತ್ತಿರುವ ವಾಣಿಜ್ಯೀಕರಣ

(d) ಆರೋಗ್ಯದ ಮೇಲೆ ಆಹಾರ ಪದ್ಧತಿಯ ಪರಿಣಾಮಗಳು

**Q2.** ಕೆಳಗೆ ನೀಡಲಾಗಿರುವ ಗದ್ಯಭಾಗವನ್ನು ಎಚ್ಚರಿಕೆಯಿಂದ ಓದಿ ಕೊಟ್ಟಿರುವ ಪ್ರಶ್ನೆಗಳಿಗೆ ನೇರ, ಸರಳ, ಸ್ಪಷ್ಟ ಮತ್ತು ಸಂಕ್ಷಿಪ್ತವಾಗಿ ಉತ್ತರಿಸಿ : *12×5=60*

ವಸಾಹತುಶಾಹಿ ಆಳ್ವಿಕೆಯು ಅಗಾಧವಾದ ದತ್ತಾಂಶ ಮತ್ತು ಮಾಹಿತಿಗಳ ಆಧಾರವನ್ನು ಅವಲಂಬಿಸಿತ್ತು. ಬ್ರಿಟಿಷರು ತಮ್ಮ ವ್ಯಾಪಾರ ವ್ಯವಹಾರಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ವಿವರವಾದ ದಾಖಲೆಗಳನ್ನು ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು ಅಭಿವೃದ್ಧಿ ಹೊಂದುತ್ತಿರುವ ನಗರಗಳ ಜೀವನ ಶೈಲಿಯನ್ನು ನಿಯಂತ್ರಿಸಲು ಅವರು ನಿರಂತರವಾಗಿ ಸರ್ವೇಕ್ಷಣಾ ವರದಿಗಳನ್ನು ಸಂಗ್ರಹಿಸಿ. ಅಧಿಕೃತ ವರದಿಗಳಲ್ಲಿ ಪ್ರಕಟಿಸುತ್ತಿದ್ದರು.

ಆರಂಭಿಕ ವರ್ಷಗಳಲ್ಲಿ ವಸಾಹತುಶಾಹಿ ಆಡಳಿತವು ಭೂ ನಕಾಶೆಗಳನ್ನು ಸಿದ್ಧ ಪಡಿಸುವಲ್ಲಿ ಆಸಕ್ತಿ ಹೊಂದಿತ್ತು ಭೌಗೋಳಿಕ ಲಕ್ಷಣಗಳು ಮತ್ತು ಭೂ ವಿಸ್ತೀರ್ಣವನ್ನು ಖಚಿತವಾಗಿ ಅರಿಯಲು ನಕಾಶೆಗಳು ತುಂಬ ಅವಶ್ಯಕವೆಂದು ಸರ್ಕಾರ ನಂಬಿತ್ತು. ಆಯಾ ಪ್ರಾಂತ್ಯಗಳ ಮೇಲೆ ಉತ್ತಮ ನಿಯಂತ್ರಣ ಹೊಂದಲು ಈ ಪರಿಜ್ಞಾನವು ಅತ್ಯಂತ ಅವಶ್ಯಕವಾಗಿತ್ತು. ನಗರಗಳು ಬೆಳೆಯುತ್ತಿದ್ದಂತೆ ನಕಾಶೆಗಳು ನಗರಾಭಿವೃದ್ಧಿಯ ಯೋಜನೆಗಷ್ಟೇ ಅಲ್ಲದೆ, ವಾಣಿಜ್ಯೀಕರಣದ ಅಭಿವೃದ್ಧಿಗೂ ಆಯಾ ಪ್ರದೇಶದ ಮೇಲೆ ನಿಯಂತ್ರಣ ಹೊಂದಲೂ ನೆರವಾದವು ನಗರದ ನಕಾಶೆಗಳು ಆಯಾ ಪ್ರದೇಶದಲ್ಲಿರುವ ನದಿಗಳು, ಬೆಟ್ಟಗಳು ಮತ್ತು ಸಸ್ಯ ಸಂಪತ್ತಿನ ಬಗ್ಗೆ ನಿಖರವಾದ ಮಾಹಿತಿಯನ್ನು ನೀಡುತ್ತಿದ್ದವು. ಇವೆಲ್ಲವೂ ರಕ್ಷಣಾ ಉದ್ದೇಶದ ಯೋಜನೆಗಳಿಗೆ ಅತಿ ಮುಖ್ಯವಾದ ಮಾಹಿತಿಗಳಾಗಿದ್ದವು. ಇದರೊಂದಿಗೆ ಘಟ್ಟ ಪ್ರದೇಶಗಳು, ಮನೆಗಳ ಗುಣಮಟ್ಟ, ಅವುಗಳ ಸಾಂದ್ರತೆ ಮತ್ತು ರಸ್ತೆಗಳ ಸ್ಥಿತಿಗತಿ, ವಾಣಿಜ್ಯ ಅವಶ್ಯಕತೆಗಳು ಮತ್ತು ವಿಧಿಸಬಹುದಾದ ತೆರಿಗೆಯ ಪ್ರಮಾಣವನ್ನು ನಿರ್ಧರಿಸಲೂ ಸಹಕಾರಿಯಾಗಿದ್ದವು.



Download FREE UPSC E-BOOKS FREE! CLICK HERE

Get Printed Study Notes for UPSC Exam - https://iasexamportal.com/notes

ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಿಂದ ಬ್ರಿಟೀಷ್ ಸರ್ಕಾರವು ಪಟ್ಟಣಗಳಲ್ಲಿ ಕ್ರಮಬದ್ಧವಾಗಿ ಪಟ್ಟಣ ಪಂಚಾಯಿತಿ ತೆರಿಗೆಗಳನ್ನು ವಾರ್ಷಿಕವಾಗಿ ವಸೂಲಿ ಮಾಡಲು ಆರಂಭಿಸಿತು. ಸಂಘರ್ಷಗಳನ್ನು ತಡೆಯುವ ಸಲುವಾಗಿ ಕೆಲವು ಜವಾಬ್ದಾರಿಗಳನ್ನು ಆಯ್ಕೆ ಮಾಡಲ್ಪಟ್ಟ ಕೆಲವು ಭಾರತೀಯ ಪ್ರತಿನಿಧಿಗಳಿಗೂ ವಹಿಸಲಾಯಿತು. ಭಾಗಶಃ ಪ್ರಜಾಪ್ರತಿನಿಧಿತ್ವ ಇರುವ ಪಟ್ಟಣ ಪಂಚಾಯಿತಿಗಳಂತಹ ಕೆಲವು ಸಂಸ್ಥೆಗಳಿಗೆ ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ರಸ್ತೆ ನಿರ್ಮಾಣ ಮತ್ತು ಸಾರ್ವಜನಿಕ ಆರೋಗ್ಯದಂತಹ ಕೆಲವು ಜೀವನಾವಶ್ಯಕ ಸೇವೆಗಳ ಜವಾಬ್ದಾರಿಯನ್ನು ವಹಿಸಲಾಯಿತು. ಇಂತಹ ಪಟ್ಟಣ ಪಂಚಾಯಿತಿಗಳು ಸಾಕಷ್ಟು ಹೊಸ ಬಗೆಯ ದಾಖಲೆಗಳನ್ನು ಸಂಗ್ರಹಿಸಿ ಪಂಚಾಯಿತಿ ಕಛೇರಿಗಳಲ್ಲಿ ನಿರ್ವಹಣೆ ಮಾಡುತ್ತಿದ್ದವು.

ನಗರಗಳ ಬೆಳವಣಿಗೆಯು ಜನಸಂಖ್ಯೆಯ ಆಧಾರದ ಮೇಲೆ ನಿಯಂತ್ರಣಕ್ಕೊಳಪಡುತ್ತಿದ್ದವು. ವಿವಿಧ ಪ್ರಾಂತ್ಯಗಳಲ್ಲಿ, ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಲ್ಲಿ ಸ್ಥಳೀಯ ಜನಗಣತಿಯನ್ನು ಮಾಡಲಾಯಿತು. ಮೊದಲನೇ ಜನಗಣತಿಯನ್ನು 1872 ರಲ್ಲಿ ಮಾಡಲು ಪ್ರಯತ್ನಿಸಲಾಯಿತು ಅಲ್ಲಿಂದೀಚೆಗೆ 1881 ರಿಂದ ದಶವಾರ್ಷಿಕ ಗಣತಿಯನ್ನು ನಿರಂತರವಾಗಿ ನಡೆಸಲಾಗುತ್ತಿದೆ ಭಾರತದಲ್ಲಿ ನಗರೀಕರಣದ ಅಧ್ಯಯನ ಮಾಡಲು ಈ ಜನಗಣನಾ ವರದಿಯು ಮೌಲ್ಯಾತೀತ ಸಂಪನ್ಮೂಲವಾಗಿದೆ.

ಈ ವರದಿಗಳನ್ನು ಗಮನಿಸಿದಾಗ ಚಾರಿತ್ರಿಕ ಬದಲಾವಣೆಗಳನ್ನು ಕಂಡುಕೊಳ್ಳಲು ನಮಗೆ ಖಚಿತವಾದ ದತ್ತಾಂಶಗಳು ದೊರಕುತ್ತವೆ ಅಗಣಿತವಾದ ಈ ಪಟ್ಟಿಯು ಕಾಯಿಲೆಗಳು ಮತ್ತು ಮರಣಗಳು ಅಥವಾ ಜನರನ್ನು ಅವರ ವಯೋಮಿತಿಗನುಗುಣವಾಗಿ ವರ್ಗೀಕರಿಸಲು ನೆರವಾಗುತ್ತದೆ ಹಾಗೂ ವಯಸ್ಸು, ಲಿಂಗ, ಜಾತಿ, ವೃತ್ತಿ ಇತ್ಯಾದಿಗಳ ಖಚಿತ ಸಂಖ್ಯಾವಾರು ವಿಂಗಡಣೆಗಳಿಗೆ ಸಂಬಂಧಿಸಿದಂತೆ ಕಲ್ಪನಾತೀತವಾದ ವಾಸ್ತವ ಚಿತ್ರಣವನ್ನು ಇದು ನೀಡುತ್ತದೆ. ಆದರೂ ಇತಿಹಾಸಕಾರರು ಈ ವರದಿಗಳು ನಮ್ಮನ್ನು ದಾರಿ ತಪ್ಪಿಸುತ್ತವೆ ಎಂದೂ ಹೇಳುವುದುಂಟು. ಈ ಸಂಖ್ಯಾವಾರು ವರದಿಗಳನ್ನು ಉಪಯೋಗಿಸಿಕೊಳ್ಳುವ ಮೊದಲು ಅವನ್ನು ಯಾರು ಯಾವ ಸನ್ನಿವೇಶಕ್ಕನುಗುಣವಾಗಿ ಸಂಗ್ರಹಿಸಿದ್ದಾರೆನ್ನುವುದನ್ನು ಅರ್ಥೈಸಿಕೊಳ್ಳಬೇಕಾದ ಅಗತ್ಯವೂ ಇದೆ. ಯಾವ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ, ಯಾವುದನ್ನು ಬಿಡಲಾಗಿದೆ ಎಂಬುದನ್ನು ನಾವು ತಿಳಿಯುವುದು ಅವಶ್ಯಕ.



Download FREE UPSC E-BOOKS FREE! CLICK HERE

Get Printed Study Notes for UPSC Exam - https://iasexamportal.com/notes

(a) ವಸಾಹತುಶಾಹಿ ಆಳ್ವಿಕೆಯ ಅವಧಿಯಲ್ಲಿ ನಡೆದ ದತ್ತಾಂಶಗಳ ಸಂಗ್ರಹಣೆಯ ಮಹತ್ವವೇನು ? 12

(b) ವಸಾಹತುಶಾಹಿ ಆಡಳಿತಗಾರರಿಗೆ ನಕಾಶೆಗಳು ಏಕೆ ಅಷ್ಟೊಂದು ಮಹತ್ವಪೂರ್ಣವಾಗಿದ್ದವು ? 12

(c) ವಸಾಹತುಶಾಹಿ ದಾಖಲೆಗಳ ಮೂಲಕ ನಗರೀಕರಣವನ್ನು ಹೇಗೆ ಅಧ್ಯಯನ ಮಾಡಬಹುದು ? 12

(d) ಇತಿಹಾಸಕಾರರು ಈ ದತ್ತಾಂಶಗಳು ಸಂದೇಹ ರಹಿತವಾದವುಗಳಲ್ಲ ಎಂದು ಹೇಳಲು ಕಾರಣವೇನು ? 12

(e) ವಸಾಹತುಶಾಹಿ ಆಡಳಿತಗಾರರ ತೆರಿಗೆ ನೀತಿ ಏನಾಗಿತ್ತು ? 12

**Q3. ಕೆಳಕಂಡ ಗದ್ಯಭಾಗವನ್ನು ಮೂರನೆಯ ಒಂದು ಭಾಗಕ್ಕೆ ಮೀರದಂತೆ ಸಂಗ್ರಹಿಸಿ ನಿಮ್ಮದೇ ಆದ ಪದಗಳಲ್ಲಿ ಬರೆಯಿರಿ ತಲೆ ಬರಹ ಕೊಡುವ ಅಗತ್ಯ ಇಲ್ಲ:** 60

'ಅಭಿವೃದ್ಧಿ' ಎಂಬ ಪದವನ್ನು ಸಾಮಾನ್ಯವಾಗಿ ನಿರ್ದಿಷ್ಟ ಸಮುದಾಯಗಳು ಪರಿಸ್ಥಿತಿಯನ್ನು ವಿವರಿಸಲು ಬಳಸಲಾಗುವುದು ಹಾಗೂ ಅವರ ಜೀವನ ಶೈಲಿಯ ಬದಲಾವಣೆಯ ಕ್ರಮವನ್ನು ಅರಿಯುವುದಕ್ಕೂ ಬಳಸಲಾಗುವುದು ಮಾನವ ಕುಲದ ಸುದೀರ್ಘ ಇತಿಹಾಸದಲ್ಲಿ ಬಹುಪಾಲು ಸಂದರ್ಭಗಳಲ್ಲಿ ಸಮುದಾಯಗಳ ಸ್ಥಿತಿಗತಿಗಳನ್ನು ಮಾನವ ಸಮುದಾಯ ಮತ್ತು ಅವರ ಜೀವಭೌತಿಕ ಪರಿಸರಗಳನ್ನು ಅಧ್ಯಯನ ಮಾಡುವ ಮೂಲಕ ತಿಳಿಯಲಾಗುತ್ತಿತ್ತು. ಮನುಷ್ಯರು ಮತ್ತು ಪರಿಸರಗಳ ನಡುವಿನ ವಿನಿಮಯ ಪ್ರಕ್ರಿಯೆಯು ಸಮಾಜವು ಘೋಷಿಸಿರುವ ಸಂಸ್ಥೆಗಳು ಮತ್ತು ತಂತ್ರಜ್ಞಾನದ ಹಂತಗಳನ್ನು ಅವಲಂಬಿಸಿರುತ್ತದೆ. ಮಾನವ ಮತ್ತು ಪರಿಸರಗಳ ನಡುವಿನ ವಿನಿಮಯ ಪ್ರಕ್ರಿಯೆಯ ವೇಗದ ಓಟಕ್ಕೆ ತಂತ್ರಜ್ಞಾನ ಮತ್ತು ಸಂಸ್ಥೆಗಳು ಸಹಕರಿಸಿವೆ ಇದಕ್ಕೆ ಪ್ರತಿಕ್ರಿಯೆಯಾಗಿ ತಂತ್ರಜ್ಞಾನದ ಪ್ರಗತಿ, ರೂಪಾಂತರ ಹಾಗೂ ಸಂಸ್ಥೆಗಳು ಸೃಷ್ಟಿಯು ಪುರೋಗತಿಯನ್ನು ಪಡೆದಿವೆ. ಇದರಿಂದ ಅಭಿವೃದ್ಧಿಯೆನ್ನುವುದು ಬಹುಮುಖೀ ಆಯಾಮಗಳನ್ನು ಪಡೆದುಕೊಂಡಿದೆ. ಇದು, ಪುನರ್ ಬದಲಾಗದ ಆರ್ಥಿಕ, ಸಾಮಾಜಿಕ ಹಾಗೂ ಪರಿಸರದ ಪ್ರತೀಕವಾಗಿದೆ.



Download FREE UPSC E-BOOKS FREE! CLICK HERE

Get Printed Study Notes for UPSC Exam - https://iasexamportal.com/notes

ಅಭಿವೃದ್ಧಿಯ ಪರಿಕಲ್ಪನೆಯು ಉಗಮಗೊಂಡು ಕ್ರಿಯಾಶೀಲತೆಯನ್ನು ಪಡೆದದ್ದು 20ನೇ ಶತಮಾನದ ಉತ್ತರಾರ್ಧದಲ್ಲಿ, ಎಂದರೆ ಎರಡನೇ ವಿಶ್ವ ಮಹಾಯುದ್ಧದ ನಂತರದ ಕಾಲದಲ್ಲಿ. ಅಭಿವೃದ್ಧಿಯ ಪರಿಕಲ್ಪನೆಯು ಆರ್ಥಿಕ ಬೆಳವಣಿಗೆಯ ಪ್ರತಿಬಿಂಬವಾಗಿತ್ತು. ಒಟ್ಟು ರಾಷ್ಟ್ರೀಯ ಉತ್ಪನ್ನ (Gross National Product – GNP) ವನ್ನು ತಲಾ ಆದಾಯ ಮತ್ತು ತಲಾ ಬಳಕೆ (Per Capita Income and Per Capita Consumption) ಗಳ ಮೂಲಕ ಮಾಪನ ಮಾಡಲಾಗುತ್ತಿತ್ತು. ಆದರೆ, ಅಸಮಾನ ಹಂಚಿಕೆಯ ಕಾರಣದಿಂದ ಆರ್ಥಿಕವಾಗಿ ಮುಂದುವರೆದ ರಾಷ್ಟ್ರಗಳೂ ಕೂಡ ಅತಿ ವೇಗವಾಗಿ ಬಡತನದ ಕಡೆಗೆ ಮುಖ ಮಾಡಿದವು. ಆದುದರಿಂದ 1970 ರ ಸುಮಾರಿನಲ್ಲಿ 'ಅಭಿವೃದ್ಧಿ'ಯ ವ್ಯಾಖ್ಯೆಯು 'ಪುನರ್ ಹಂಚಿಕೆಯೊಂದಿಗೆ ಬೆಳವಣಿಗೆ', ಹಾಗೂ 'ಬೆಳವಣಿಗೆ ಮತ್ತು ಸಮಾನತೆ' – ಎಂಬ ಅಂಶಗಳನ್ನು ಒಳಗೊಂಡಿತು. ಪುನರ್ ಹಂಚಿಕೆ ಮತ್ತು ಸಮಾನತೆ 'ಯ ಪ್ರಶ್ನೆಗಳೊಂದಿಗೆ ವ್ಯವಹರಿಸುವಾಗ, ಅಭಿವೃದ್ಧಿ ಎಂಬುದನ್ನು ಆರ್ಥಿಕತೆಗಷ್ಟೇ ಸೀಮಿತಗೊಳಿಸಲು ಸಾಧ್ಯವಿಲ್ಲ ಎಂದು ತಿಳಿಯಲಾಯಿತು ಅಭಿವೃದ್ಧಿಯೆಂಬುದು ಉತ್ತಮ ಗುಣಮಟ್ಟದ ಜೀವನ ಶೈಲಿ ಮತ್ತು ಆರೋಗ್ಯ, ಶಿಕ್ಷಣ, ಸಮಾನ ಅವಕಾಶ, ರಾಜಕೀಯ ಮತ್ತು ನಾಗರಿಕ ಹಕ್ಕುಗಳು ಎಲ್ಲರಿಗೂ ಸಮಾನವಾಗಿ ದೊರಕುವುದೇ ಆಗಿದೆ 1980 ರ ಸುಮಾರಿನಲ್ಲಿ, ಅಭಿವೃದ್ಧಿಯೆಂಬುದು ಸಮಾಜದ ಎಲ್ಲ ವರ್ಗಕ್ಕೂ, ಎಲ್ಲವೂ ಸಮಾನವಾಗಿ ದೊರಕುವುದು ಎಂಬ ಪರಿಕಲ್ಪನೆ ಹೆಚ್ಚು ವ್ಯಾಪಕತೆಯನ್ನು ಪಡೆದುಕೊಂಡಿತು.

1960 ರ ಸುಮಾರಿನಲ್ಲಿ ಪಾಶ್ಚಿಮಾತ್ಯ ದೇಶಗಳಲ್ಲಿ ಪರಿಸರ ಜಾಗೃತಿಯ ಅಂಶಗಳು ಹೆಚ್ಚು ಪ್ರಚಾರಕ್ಕೆ ಬಂದವು. ಕಾರಣ, ದೀರ್ಘಕಾಲೀನ ಅಭಿವೃದ್ಧಿ ಎಂಬ ಕಲ್ಪನೆಯು ಆಗ ಜಾಗೃತಗೊಂಡಿತ್ತು ಇದರಿಂದ ಅನಪೇಕ್ಷಿತ ಕೈಗಾರಿಕೀಕರಣವು ಪರಿಸರದ ಮೇಲೆ ಉಂಟು ಮಾಡುವ ಪರಿಣಾಮಗಳನ್ನು ಜನ ಗಮನಿಸತೊಡಗಿದರು.

ಪರಿಸರ ವಿಷಯಗಳ ಬಗೆಗೆ ವಿಶ್ವ ಸಮುದಾಯದ ಕಳಕಳಿಯು ಹೆಚ್ಚುತ್ತಿದ್ದು, ವಿಶ್ವ ಸಂಸ್ಥೆಯು, 'ವರ್ಲ್ಡ್ ಕಮೀಷನ್ ಆನ್ ಎನ್‌ವೈರ್‌ನಮೆಂಟ್ ಅಂಡ್ ಡೆವಲಪ್‌ಮೆಂಟ್ (WCED)' ಎಂಬ ಸಮಿತಿಯನ್ನು ನಾರ್ವೆಯ ಪ್ರಧಾನ ಮಂತ್ರಿಯಾದ ಗ್ರೋ ಹಾರ್ಲೆಮ್ ಬ್ರಂಟ್ ಲ್ಯಾಂಡ್ ಅವರ ನೇತೃತ್ವದಲ್ಲಿ ಸ್ಥಾಪಿಸಲಾಯಿತು. ಈ ಸಮಿತಿಯು ತನ್ನ ವರದಿ (ಇದು


Download FREE UPSC E-BOOKS FREE! CLICK HERE

Get Printed Study Notes for UPSC Exam - https://iasexamportal.com/notes

ಬ್ರಂಟ್ ಲ್ಯಾಂಡ್ ವರದಿ ಎಂದೂ ಕರೆಯಲ್ಪಡುತ್ತದೆ) ಯನ್ನು 'ಅವರ್ ಕಾಮನ್ ಫ್ಯೂಚರ್' ಎಂಬ ಶೀರ್ಷಿಕೆಯಡಿಯಲ್ಲಿ 1987 ರಲ್ಲಿ ಸಲ್ಲಿಸಿತು. WCED ಯು ದೀರ್ಘಕಾಲೀನ ಅಭಿವೃದ್ಧಿಯನ್ನು ಕುರಿತು ಸರಳ ವ್ಯಾಖ್ಯಾನವನ್ನು ನೀಡಿತು. ಈ ವರದಿಯು ದೀರ್ಘಕಾಲೀನ ಅಭಿವೃದ್ಧಿಯನ್ನು, 'ಬಾವೀ ಜನಾಂಗದ ಅಗತ್ಯಗಳ ಜೊತೆ ರಾಜಿ ಮಾಡಿಕೊಳ್ಳದೆ ಪ್ರಸ್ತುತ ಅಗತ್ಯತೆಗಳನ್ನು ಅಭಿವೃದ್ಧಿಯ ಮೂಲಕ ನೀಡುವುದು ಹೇಗೆ' ಂದು ವ್ಯಾಖ್ಯಾನಿಸಿದೆ.

(305 ಶಬ್ದ)

**Q4.** **ಕೆಳಗಿನ ಗದ್ಯ ಭಾಗವನ್ನು ಇಂಗ್ಲೀಷಿಗಿ ಅನುವಾದಿಸಿ :** ***20***

ಪ್ರೇಮ್‌ಚಂದ್ ಅವರ ಪ್ರಕಾರ, ನಮ್ಮ ಸುತ್ತಲೂ ಚೆದುರಿರುವ ಸುಳ್ಳುಗಳನ್ನು ಹಿಡಿದಿಡುವ ಪರಿಯೇ ಕಥೆ, ಅವುಗಳನ್ನು ಸರಿಯಾದ ಕ್ರಮದಲ್ಲಿ ಸೆರೆ ಹಿಡಿದಿಡುವುದರಲ್ಲಿ ಇದು ಅಡಗಿದೆ. ಪ್ರತಿಯೊಬ್ಬರ ಜೀವನ ವಿಧಾನವೂ ಇನ್ನೊಬ್ಬರ ಜೀವನ ವಿಧಾನಕ್ಕಿಂತ ಎಲ್ಲಾ ರೀತಿಯಲ್ಲೂ ಭಿನ್ನವಾಗಿರುತ್ತದೆ. ಇದು ಆರಂಭ, ಬೆಳವಣಿಗೆ ಮತ್ತು ಅಂತ್ಯದವರೆಗೂ ಕಾಣುತ್ತದೆ. ಪ್ರತಿಯೊಬ್ಬರಿಗೂ ಒಂದಲ್ಲಾ ಒಂದು ಕಥೆ ಇರುತ್ತದೆ. ಒಬ್ಬರು ಮತ್ತೊಬ್ಬರನ್ನು ಹೋಲದಿರುವಂತೆ ! ಹಾಗಿಯೇ ಜೀವನದ ಕಥೆಯೂ ಇನ್ನೊಬ್ಬರೊಂದಿಗೆ ಹೋಲುವುದಿಲ್ಲ.

ಯಾವುದೇ ವ್ಯಕ್ತಿಯು ತನ್ನ ಆತ್ಮಕಥೆಯನ್ನು ಬರೆಯಲು ಆಗದೇ ಇರುವುದಿಲ್ಲ. ನನ್ನ ಆತ್ಮಕಥೆಯು ನನ್ನ ಜೀವನದ ಕಥೆ. ಈ ಕಥೆಯು ಕೇವಲ ನನಗಷ್ಟೇ ಸೀಮಿತ. ನನ್ನ ಕಥೆಯು ಮತ್ತೊಬ್ಬರೊಂದಿಗೆ ಹೋಲಿಕೆಯಾದರೆ ಅದು ಅವರ ಕಥೆಯೂ ಹೌದೂ ನನ್ನ ಕಥೆಯು ನನ್ನ ಕಾಲವನ್ನು ಪ್ರತಿನಿಧಿಸುತ್ತದೆ, ನನ್ನ ಸಮುದಾಯವನ್ನೂ ಪ್ರತಿನಿಧಿಸುತ್ತದೆ ಇದು ಅವರಿಗೂ ಅನ್ವಯಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ಜೀವನವೂ ಒಂದು ಕಥೆಯಾಗಬಲ್ಲ ಸಾಮರ್ಥ್ಯವನ್ನು ಹೊಂದಿರುತ್ತದೆ.



Download FREE UPSC E-BOOKS FREE! CLICK HERE

Get Printed Study Notes for UPSC Exam - https://iasexamportal.com/notes

ನೀವೊಂದು ಲೇಖನಿಯನ್ನು ತೆಗೆದುಕೊಂಡು ಒಂದು ಹಾಳೆಯ ಮೇಲೆ ಏನನ್ನಾದರೂ ಗೀಚಿ ಅದು ನಿಮ್ಮ ಜೀವನ ಕಥೆಯಾಗಿರುತ್ತದೆ. ಬಾಲ್ಯದಿಂದಲೂ ಅನುಭವಿಸಿರುವ ಎಲ್ಲವೂ ಬರೆಯತಕ್ಕಂತಹವುಗಳೇ ಆಗಿರುತ್ತವೆ. ಇದನ್ನು ಆತ್ಮಕಥೆ ಎನ್ನುವುದು. ಆತ್ಮಕಥೆಗೆ ಸಂಬಂಧಿಸಿದ ಮೊದಲ ನಿಯಮವೆಂದರೆ, ಎಲ್ಲವನ್ನೂ ನೇರವಾಗಿ ಮತ್ತು ಪ್ರಾಮಾಣಿಕವಾಗಿ ಹೇಳುವುದು.

ಇವೆಲ್ಲಕ್ಕೂ ಅಭ್ಯಾಸಬೇಕು ಇದಕ್ಕೆ ನೈತಿಕ ಸ್ಥೈರ್ಯವೂ ಇರಬೇಕು. ಹಾಗಾಗದಿದ್ದಲ್ಲಿ ಇದು ಸಂಪೂರ್ಣವಾಗಿ ಆತ್ಮಕಥನದ ಸ್ವರೂಪವನ್ನು ಪಡೆದುಕೊಳ್ಳುವುದಿಲ್ಲ ಬದಲಾಗಿ ಅದು ನಡೆದ ಘಟನೆಗಳ ದಾಖಲೆ ಅಥವಾ ಒಂದು ದಿನಚರಿಯಾಗುತ್ತದೆ. ಹಲವು ದಿನಗಳ ಮತ್ತು ವರ್ಷಗಳ ದಿನಚರಿಯು ಒಂದು ಆತ್ಮಕಥೆಯೂ ಆಗುತ್ತದೆ.

**Q5. ಕೆಳಗಿನ ಗದ್ಯ ಭಾಗವನ್ನು ಕನ್ನಡಕ್ಕೆ ಅನುವಾದಿಸಿ :** ***20***

Socrates was one of the celebrated Greek thinkers who became very influential in the development of Greek philosophy in particular and Western philosophy in general.

Socrates tried to bring radical changes in the society. But his attempts in the social field were not accepted and appreciated by the authorities. But convinced of his principles Socrates continued his efforts. The authorities considered him as a threat to their existence and as a result he was arrested and sent to prison. Later, he was given capital punishment because he was frank and outspoken. When he received the news of the death penalty he was not at all shaken.

It confused all the officials and even Socrates' own disciples because they had never seen a person accepting the news of his death penalty with a smiling face. When asked why so, he replied, "I have been preparing for death all my life. I have never done anything wrong to any man. That is why I am able to accept even death with a smiling face."

In his use of critical reasoning, by his unwavering commitment to truth and through the vivid example of his own life, Socrates set the standard for all subsequent Western philosophy.



Download FREE UPSC E-BOOKS FREE! CLICK HERE

Get Printed Study Notes for UPSC Exam - https://iasexamportal.com/notes

**Q6. (a)** ಕೆಳಗಿನ ಪದಗಳ ಕನ್ನಡ ರೂಪ ಬರೆಯಿರಿ : *2×5=10*

(i) ಸರ್ಪ 2

(ii) ತೃಷೆ 2

(iii) ಅಂತರ್ಧಾನ 2

(iv) ಹಲ 2

(v) ಕಪೋಲ 2

**(b)** ಕೆಳಗಿನ ಪದಗಳ ಸಂಧಿರೂಪ ತಿಳಿಸಿ : *2×5=10*

(i) ವನೌಷಧ 2

(ii) ಪ್ರತ್ಯುಪಕಾರ 2

(iii) ಪಿತ್ರಾರ್ಜಿತ 2

(iv) ವಾಗ್ದಾನ 2

(v) ವಿರಾಡ್ರೂಪ 2

**(c)** ಛಂದಸ್ಸಿಗೆ ಸಂಬಂಧಿಸಿದ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : *2×5=10*

(i) ಶ್ಲೇಷಾಲಂಕಾರ ಎಂದರೇನು ? 2

(ii) 'ಅಂಶಗಣ' ಎಂದರೇನು ? 2

(iii) 'ಗಜ ಪ್ರಾಸ' ಎಂದರೇನು ? 2

(iv) 'ರಗಳೆ ಕವಿ' ಎಂದು ಯಾರನ್ನು ಕರೆಯಲಾಗುವುದು ? 2

(v) 'ಶ್ರೀರಾಮಾಯಣ ದರ್ಶನಂ' ಕಾವ್ಯ ಯಾವ ಛಂದಸ್ಸಿನಲ್ಲಿದೆ ? 2

**(d)** ಕೆಳಗಿನ ಕವನ ಅಥವಾ ಕವನದ ಸಾಲನ್ನು ಬರೆದ ಕವಿಯನ್ನು ಹೆಸರಿಸಿ : *2×5=10*

(i) 'ಕೊಟ್ಟ ಕುದುರೆಯನೇರಲರಿಯದೆ ಮತ್ತೊಂದ ಬಯಸುವವರು ವೀರರೂ ಅಲ್ಲ ಧೀರರೂ ಅಲ್ಲ' 2

(ii) 'ಹಸಿವಾದೊಡೆ ಭಿಕ್ಷಾನ್ನಗಳುಂಟು, ತೃಷೆಯಾದೊಡೆ ಕೆರೆ ಹಳ್ಳ ಬಾವಿಗಳುಂಟು' 2

(iii) 'ನೀರೊಳಗಿರ್ದುಂ ಬೆಮರ್ತನುರಗಪತಾಕಂ' 2

(iv) 'ಸಾವಿರಾರು ನದಿಗಳು' ಕವನವನ್ನು ರಚಿಸಿದವರು ಯಾರು ? 2

(v) 'ನೆನೆಯದಿರಣ್ಣ ಭಾರತದೊಳ್ ಪೆರರಾದುಮನ್ ಒಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯಾ' 2



Download FREE UPSC E-BOOKS FREE! CLICK HERE